ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : ಪ ಪ್ರ : 2014–15 : ಡಿಸೆಂಬರ್ 24, 2014

## ಹೆಸರಾಂತ ಚಿತ್ರ ನಿರ್ದೇಶಕ ಕೆ. ಬಾಲಚಂದರ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

ಬೆಂಗಳೂರು, ಡಿಸೆಂಬರ್ 24 :

ಹೆಸರಾಂತ ಚಿತ್ರ ನಿರ್ದೇಶಕ ಹಾಗೂ ಚಿತ್ರ ಸಾಹಿತಿ ಶ್ರೀ ಕೆ. ಬಾಲಚಂದರ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕನ್ನಡ, ತೆಲುಗು ಹಾಗೂ ತಮಿಳು ಚಿತ್ರರಂಗದ ದಿಗ್ಗಜರೆನಿಸಿದ್ದ ಶ್ರೀ ಬಾಲಚಂದರ್ ಅವರ ನಿರ್ದೇಶನದ *ಮರೋ ಚರಿತ್ರ* ಚಿತ್ರವು ತೆಲುಗು ಚಿತ್ರರಂಗದಲ್ಲಿ ಮತ್ತೊಂದು ಚರಿತ್ರೆಯನ್ನೇ ಸೃಷ್ಠಿಸಿತ್ತು. ದುರಂತ ಪ್ರೇಮ ಕಥೆಯ ಈ ತೆಲುಗು ಚಿತ್ರವನ್ನು ಕನ್ನಡ ಮತ್ತು ತಮಿಳು ಪ್ರೇಕ್ಷಕರು ಕೂಡಾ ವಾರಗಟ್ಟಲೆ ನೋಡಿ ಮೆಚ್ಚಿಕೊಂಡಿದ್ದರು. ನಂತರ, ಈ ಚಿತ್ರ *ಏಕ್ ದುಜೆ ಕೆ ಲಿಯೇ* ಹೆಸರಿನಲ್ಲಿ ಹಿಂದಿ ಚಿತ್ರ ರಸಿಕರನ್ನೂ ತನ್ನತ್ತ ಸೆಳೆಯಿತು.

ಎರಡು ರೇಖೆಗಳು, ಬೆಂಕಿಯಲ್ಲಿ ಅರಳಿದ ಹೂವು, ತಪ್ಪಿದ ತಾಳ ಸೇರಿದಂತೆ ಹಲವು ಕನ್ನಡ ಚಿತ್ರಗಳನ್ನು ಶ್ರೀ ಬಾಲಚಂದರ್ ಅವರು ನಿರ್ದೇಶಿಸಿದ್ದರು. ಕನ್ನಡದ ರಜನಿಕಾಂತ್, ಪ್ರಕಾಶ್ ರೈ ಹಾಗೂ ರಮೇಶ್ ಅಂತಹ ಪ್ರತಿಭೆಗಳನ್ನು ಚಲನಚಿತ್ರರಂಗಕ್ಕೆ ಪರಿಚಯಿಸಿದ ಕೀರ್ತಿ ಶ್ರೀ ಬಾಲಚಂದರ್ ಅವರಿಗೆ ಸಲ್ಲುತ್ತದೆ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

****************

ಡಿ ಪಿ ಎಂ